# ರುಚಿಕರ ಬಟರ್‌ನಟ್ ಸ್ಕ್ವಾಷ್



ಅಮೆರಿಕದಲ್ಲಿ ಈ ತರಕಾರಿಗೆ ಒಳ್ಳೆಯ ಬೇಡಿಕೆ ಇದೆ. ಅಮೆರಿಕದ ಜನರು ಇದನ್ನು ಬಹಳ ಇಷ್ಟಪಟ್ಟು ಸೂಪ್, ಸಲಾಡ್, ಸ್ಯಾಂಡ್‌ವಿಚ್ ಮುಂತಾದವುಗಳಿಗೆ ಬಳಸುತ್ತಾರೆ. ಹಸಿಯಾಗಿ ತಿನ್ನಲು ಇಷ್ಟವಿಲ್ಲದವರು ಬೇಯಿಸಿ ತಿನ್ನುತ್ತಾರೆ.

■ ಚಿತ್ರ – ಬರಹ: **ಹರೀಶ್ ಹಳೆಮನೆ**



ಸೌತೆಯಲ್ಲಿ ವಿವಿಧ ತರದ ಸೌತೆಗಳಿವೆ. ಕುಂಬಳಕಾಯಿಗಳಲ್ಲೂ ಹಲವಾರು ವಿಧಗಳಿವೆ. ಸಿಹಿಕುಂಬಳವೂ (ಚೀನಿಕಾಯಿ) ಅವುಗಳಲ್ಲೊಂದು. ಚೀನಿಕಾಯಿಯ ಪ್ರಭೇದವನ್ನಿಲ್ಲಿ ನೋಡೋಣ.

ಇದರ ಹೆಸರು ‘ಬಟರ್‌ನಟ್ ಸ್ಕ್ವಾಷ್. ಬೀಜಗಳು ಹಾಗೂ ಗಿಡಗಳು ಕಾಣಲು ಚೀನಿಕಾಯಿಯಂತೆಯೇ.

ಅಮೆರಿಕದಿಂದ ಬಂದ ತರಕಾರಿಯ ಪ್ರಭೇದವಿದು. ಒಳಭಾಗದಲ್ಲಿ ಪೂರ್ತಿ ಸಿಹಿಗುಂಬಳವನ್ನೇ ಹೋಲುತ್ತದೆಯಾದರೂ ಮೇಲ್ಭಾಗ ಸಪೂರವಾಗಿರುತ್ತದೆ. ಈ ಭಾಗದಲ್ಲಿ ಬೀಜವಿರುವುದಿಲ್ಲ. ಬೀಜಗಳು ಗಾತ್ರದಲ್ಲಿ ಸಿಹಿಗುಂಬಳದ ಬೀಜಗಳಿಗಿಂತ ಸ್ವಲ್ಪ ಸಣ್ಣದಾಗಿರುತ್ತವೆ.

(38ನೇ ಪುಟ ನೋಡಿ)